ಜೆಎಸ್‌ಎಸ್ ಮಹಾವಿದ್ಯಾಪೀಠ

ESTD - 1964

# ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

ಭಾರತ ಸರ್ಕಾರದ ಡಿಬಿಟಿಯಿಂದ "ಸ್ಟಾರ್ ಕಾಲೇಜ್ ಸ್ಕೀಮ್" ಅಡಿಯಲ್ಲಿ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ • ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

ಊಟಿರಸ್ತೆ, ಮೈಸೂರು-೫೭೦ ೦೨೫

50 ವರ್ಷಗಳು

☎ 0821-2548236 & 2548380 Fax: 0821-2548238 E-mail: jssautonomous@gmail.com

ದಿನಾಂಕ: 09-09-2014

**<u>ಪ್ರಕಟಣೆಯ ಕೃಪೆಗಾಗಿ</u>**

***ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಸಮುಚ್ಚಯ, ಊಟಿ ರಸ್ತೆ, ಮೈಸೂರು***

## ವಿದ್ಯಾರ್ಥಿ ವೇದಿಕೆಗಳ ಉದ್ಘಾಟನೆ

ಮೈಸೂರು, ಸೆ. 9 : ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಪದವಿ ಕಾಲೇಜು, ಊಟಿ ರಸ್ತೆ, ಮೈಸೂರು ಏರ್ಪಡಿಸಿದ್ದ ಕಲಾ, ವಾಣಿಜ್ಯ, ವಿಜ್ಞಾನ ವಿದ್ಯಾರ್ಥಿ ವೇದಿಕೆಗಳ ಉದ್ಘಾಟನೆಯನ್ನು ಕಾಲೇಜಿನ ಸಭಾಂಗಣದಲ್ಲಿ ವಿಜೃಂಭಣೆಯಿಂದ ನೆರವೇರಿಸಲಾಯಿತು.

ಉದ್ಘಾಟನಾ ಭಾಷಣದಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದ ರೊಟೇರಿಯನ್ ಜಿ. ಕೆ. ಬಾಲಕೃಷ್ಣರವರು, ರೋಟೇರಿಯನ್ ಮತ್ತು ಅಂತರಾಷ್ಟ್ರೀಯ ನಿರ್ದೇಶಕನಾಗಿ ವಿವಿಧ ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದ್ದೇನೆ, ಇದು ಕಷ್ಟಸಾಧ್ಯ. ಅಂತಹುದರಲ್ಲಿ ಸುತ್ತೂರು ಶ್ರೀ ಶ್ರೀ ದೇಶಿಕೇಂದ್ರಸ್ವಾಮೀಜಿಗಳು ದೇಶ ಹಾಗೂ ವಿದೇಶಗಳಲ್ಲಿ ಜೆಎಸ್‌ಎಸ್ ಸಂಸ್ಥೆಯನ್ನು ವಿವಿಧ ವಿದ್ಯಾಕ್ಷೇತ್ರಗಳಲ್ಲಿ ಬೆಳೆಸಿ, ದಾಸೋಹ ಹಾಗೂ ವಿದ್ಯಾರ್ಜನೆಯ ಕೈಂಕರ್ಯಗಳನ್ನು ಕೈಗೊಂಡಿರುವುದು ಸುಲುಭದ ಮಾತಲ್ಲ ಎಂದರು. ಶ್ರೀಗಳವರು ಸುತ್ತೂರು ಹಾಗೂ ಕರ್ನಾಟಕದ ಜನತೆಗೆ "ಗಂಗಾಸ್ನಾನ ತುಂಗಾಪಾನ" ಎಂಬ ನಾಣ್ಣುಡಿಯನ್ನು "ಗಂಗಾಸ್ನಾನ ಕಪಿಲಪಾನ"ವಾಗಿ ಮಾರ್ಪಾಡು ಗೊಳಿಸಿದರು. ಅವರು ವ್ಯಕ್ತಿ ಅಲ್ಲ, ಒಂದು ಶಕ್ತಿ. ಅವರೊಬ್ಬ "ದೇವಮಾನವ" ಎಂದು ಅವರು ಸಲ್ಲಿಸಿದ ಇತರ ಕೊಡುಗೆ ಗಳನ್ನು ಉದಾಹರಿಸಿದರು.

ಮುಂದುವರಿಸಿ ಮಾತನಾಡುತ್ತಾ, "ಕಲೆಗಳಿಲ್ಲದ ದೇಶವಿಲ್ಲ, ಸಾಹಿತ್ಯವಿಲ್ಲದ ಪುರಾಣಗಳಿಲ್ಲ", ಸಾಹಿತ್ಯವನ್ನು ಪ್ರೌಢಭಾಷೆಯಿಂದ ಆಡುಭಾಷೆಗೆ ತಂದ ಕೀರ್ತಿ ಶರಣರಿಗೆ ಸಲ್ಲುತ್ತದೆ, ಎಂಟು ಜ್ಞಾನಪೀಠ ಪ್ರಶಸ್ತಿ ಪಡೆದಿರುವ ಏಕೈಕ ಭಾಷೆ ಕನ್ನಡ ಎಂದು ತಿಳಿಸಿದರು. ವಿದ್ಯಾರ್ಥಿಗಳಿಗೆ ಕಿವಿಮಾತನ್ನು ಹೇಳುತ್ತಾ, ನಿಮ್ಮಲ್ಲಿ ನೀವು ನಂಬಿಕೆ ಇಟ್ಟುಕೊಳ್ಳಬೇಕು, ಒಳ್ಳೆಯ ಕನಸನ್ನು ಕಾಣಬೇಕು, ಅದನ್ನು ನನಸಾಗಿಸಲು ಶ್ರಮಪಡಬೇಕು. ಗೆಲುವಿನ ಹಾದಿಗೆ ಕಠಿಣ ಶ್ರಮವೊಂದಿದ್ದರೆ ಸಾಲದು, ಅದರೊಂದಿಗೆ ನಂಬಿಕೆ, ವಿಶ್ವಾಸ, ಬದ್ಧತೆ, ಅರ್ಹತೆ, ಅನುಕಂಪ, ನಮ್ರತೆ, ದೃಢತೆ, ಧೈರ್ಯ, ದೃಢನಿಶ್ಚಯ ಮತ್ತು ನಡತೆ ಬಹು ಮುಖ್ಯವಾದುದು, ಇವುಗಳನ್ನು ರೂಢಿಸಿಕೊಂಡಲ್ಲಿ ನಿಮ್ಮ ಜೀವನದ ಹಾದಿಯು ಸುಗಮವಾಗುತ್ತದೆ ಎಂದು ಬಿಲ್‌ಗೇಟ್ಸ್, ಲ್ಯಾರಿಪೇಜ್, ಅಲೆಕ್ಸಾಂಡರ್ ಪ್ಲೇಮಿಂಗ್, ಸ್ವಾಮಿವಿವೇಕಾನಂದ ಇವರು ಗಳನ್ನು ನೆನಪಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ಕ್ರೀಡಾ ಪ್ರಾಧಿಕಾರದ ಕ್ರಿಕೆಟ್ ತರಬೇತುದಾರರಾದ ಶ್ರೀ ಸಿ. ಜಿ. ರಮೇಶ್‌ರವರು ಮಾತನಾಡುತ್ತಾ, ಎಲ್ಲಾ ಕ್ಷೇತ್ರಗಳಲ್ಲೂ ಮುನ್ನಡೆ ಸಾಧಿಸುತ್ತಿರುವುದು ಗ್ರಾಮೀಣ ವಿದ್ಯಾರ್ಥಿಗಳೇ. ವಿದ್ಯಾಭ್ಯಾಸವು ಮುಖ್ಯ, ಹಾಗೆಯೇ ಪಠ್ಯೇತರ ಚಟುವಟಿಕೆಗಳಿಗೂ ಒತ್ತು ನೀಡಬೇಕು. ಈಗಿನ ವಿದ್ಯಾರ್ಥಿಗಳಲ್ಲಿ ಕಲಿಕಾನ್ಯೂನತೆಯನ್ನು ನಾವು ಕಾಣುತ್ತಿದ್ದೇವೆ, ಇದನ್ನು ಹೋಗಲಾಡಿಸಲು ದೈಹಿಕ ವ್ಯಾಯಾಮ ಮತ್ತು ಕ್ರೀಡೆಗಳಲ್ಲಿ ಹೆಚ್ಚು ಆಸಕ್ತಿ ಬೆಳೆಸಿಕೊಳ್ಳಬೇಕು. ಇದರಿಂದ ಮಾನಸಿಕಶಕ್ತಿ, ದೈಹಿಕಶಕ್ತಿ, ಆತ್ಮಸ್ಥೈರ್ಯ ಮತ್ತು ಆರೋಗ್ಯ ವೃದ್ಧಿಯಾಗುತ್ತದೆ ಎಂದು ವಿದ್ಯಾರ್ಥಿಗಳಿಗೆ ಕರೆಯಿತ್ತರು.

ಅಧ್ಯಕ್ಷರ ಭಾಷಣದಲ್ಲಿ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ. ವಿ. ಸಾಂಬಶಿವಯ್ಯನವರು ಮಾತನಾಡಿ, ರೊಟೇರಿಯನ್ ಸಿ. ಜೆ. ಬಾಲಕೃಷ್ಣ ಹಾಗೂ ಶ್ರೀ ಸಿ. ಜಿ. ರಮೇಶ್‌ರವರು ಕೊಟ್ಟಂತಹ ಮಾರ್ಗದರ್ಶನವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಭವಿಷ್ಯವನ್ನು ರೂಪಿಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಬುದ್ಧಿಮಾತು ಹೇಳಿದರು. ಇದಲ್ಲದೆ, ಕಾಲೇಜು ಅಭಿವೃದ್ಧಿ ಪಥದತ್ತ ನಡೆಯುತ್ತಿರುವ ಬಗ್ಗೆ ಮಾತನಾಡಿ, ನಮ್ಮ ಕಾಲೇಜು ಅತಿ ಉತ್ತಮ ಕಾಲೇಜು. "ನ್ಯಾಕ್ ಎ ಗ್ರೇಡ್", "ಕಾಲೇಜ್ ವಿತ್ ಪೊಟೇನ್‌ಷಿಯಲ್ ಫಾರ್ ಎಕ್ಸಲೆನ್ಸ್" ಮತ್ತು ಸ್ವಾಯತ್ತತೆ ಈ ಮೂರು ಮಾನ್ಯತೆಗಳನ್ನು ಹೊಂದಿರುವ ದೇಶದಲ್ಲಿನ **50** ಕಾಲೇಜುಗಳಲ್ಲಿ ಒಂದು ಎಂದು ತಿಳಿಸಿದರು. ಯುಜಿಸಿ, ವಿಶ್ವವಿದ್ಯಾನಿಲಯ ಮತ್ತು ರಾಜ್ಯಸರ್ಕಾರದ ಶಿಕ್ಷಣ ಸಚಿವಾಲಯದಿಂದ ಹೆಚ್ಚು ಅನುದಾನ ಪಡೆಯುವಲ್ಲಿ ಯಶಸ್ವಿಯ ದಿಟ್ಟಹೆಜ್ಜೆ ಹಾಕಿ ಮುನ್ನಡೆಯುತ್ತಿದೆ, ಶಿಕ್ಷಣ ಕ್ಷೇತ್ರದಲ್ಲಿ ಕೌಶಲ್ಯಾಧಾರಿತ ತರಬೇತಿ ಕೇಂದ್ರವನ್ನು ಸ್ಥಾಪಿಸುವಲ್ಲಿ ಹೆಚ್ಚು ಒತ್ತು ಕೊಡುತ್ತಿದ್ದೇವೆ, ಈ ರೀತಿ ಮುನ್ನಡೆಸುವಲ್ಲಿ ದಿಟ್ಟಹೆಜ್ಜೆ ಇಟ್ಟಿರುವ ನಮ್ಮ ಸ್ವಾಮೀಜಿಯವರಾದ ಜಗದ್ಗುರು ಶ್ರೀ ಶಿವರಾತ್ರಿದೇಶೀಕೇಂದ್ರ ಮಹಾಸ್ವಾಮೀಜಿಯವರ ಪರಿಶ್ರಮ ಹಾಗೂ ಅಧ್ಯಾಪಕರು, ಅಧ್ಯಾಪಕೇತರರ ಶ್ರಮವೇ ಕಾರಣ ಎಂದು ಅಭಿನಂದನೆ ವ್ಯಕ್ತಪಡಿಸಿದರು.

ಪ್ರಾಸ್ತವಿಕ ನುಡಿಗಳನ್ನಾಡಿದ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ. ಬಿ. ಮಲ್ಲಿಕಾರ್ಜುನ ಪಂಡಿತ್‌ರವರು ಕಾಲೇಜು ಬೆಳೆದು ಬಂದ ರೀತಿ ವಿವರಿಸಿ, ಕಾಲೇಜಿನ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟರು. ಕಾಲೇಜಿನ ವಿದ್ಯಾರ್ಥಿ ವೇದಿಕೆಯು ಮೂರು ವಿಭಾಗಗಳನ್ನೊಳಗೊಂಡಿದ್ದು, ಇದರ ಸದುಪಯೋಗವನ್ನು ಮಾಡಿಕೊಳ್ಳಬೇಕೆಂದು ವಿದ್ಯಾರ್ಥಿ ಗಳಿಗೆ ತಿಳಿಸಿದರು.

ವೇದಿಕೆಯಲ್ಲಿ ಶೈಕ್ಷಣಿಕ ಡೀನ್ ಪ್ರೊ. ಎಂ. ಮಹದೇವಪ್ಪ, ಸಾಂಸ್ಕೃತಿಕ ವೇದಿಕೆ ಸಂಚಾಲಕರಾದ ಪ್ರೊ. ಪಿ. ಎಂ. ಮಹದೇವಸ್ವಾಮಿ, ಕ್ರೀಡಾವೇದಿಕೆ ಸಂಚಾಲಕರಾದ ಶ್ರೀ ಎಂ. ಎಸ್. ವೆಂಕಟರಾವ್ ಉಪಸ್ಥಿತರಿದ್ದರು. ದ್ವಿತೀಯ ಬಿಎಸ್ಸಿ ವಿದ್ಯಾರ್ಥಿ ಸುಮಂತ್ ಆರ್.ಎಂ. ಅವರ ಪ್ರಾರ್ಥಿಸಿದರು, ದ್ವಿತೀಯ ಬಿಕಾಂ ವಿದ್ಯಾರ್ಥಿ ತೋಂಟದಾರ್ಯ ಸ್ವಾಗತಿಸಿದರು. ತೃತೀಯ ಬಿಎಸ್ಸಿ ವಿದ್ಯಾರ್ಥಿನಿಯರಾದ ಅನುಷಾ ಮತ್ತು ಮಾನಸ ಕೀರ್ತನೆಯನ್ನು ಸೊಗಸಾಗಿ ಹಾಡಿದರು. ತೃತೀಯ ಬಿಎ ವಿದ್ಯಾರ್ಥಿನಿ ಕು. ರಜಿನಿ ಬಿ. ವಂದನಾರ್ಪಣೆ ಸಲ್ಲಿಸಿದರು. ಕು. ರಶ್ಮಿ ಆರ್. ಎನ್. ಕಾರ್ಯಕ್ರಮ ನಿರೂಪಿಸಿದರು. ಸಮಾರಂಭದಲ್ಲಿ ಅಧ್ಯಾಪಕರು, ಅಧ್ಯಾಪಕರೇತರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

(ಎಂ. ಬಿ. ಮಲ್ಲಿಕಾರ್ಜುನ ಪಂಡಿತ್)
ಪ್ರಾಂಶುಪಾಲರು

ಗೆ,

ಸಂಪಾದಕರು

..........................................ದಿನಪತ್ರಿಕೆ

.................................................................

..........................................ಮೈಸೂರು